ಕರ್ನಾಟಕ ಸರ್ಕಾರ

ಸಂಖ್ಯೆ:ಎನ್‌ಆರ್‌ಎಸ್(1)82/15-16

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ
ನಿರ್ದೇಶನಾಲಯ, ಆನಂದರಾವ್ ವೃತ್ತ,
ಬೆಂಗಳೂರು, ದಿನಾಂಕ:28.03.2016

## ಅಧಿಕೃತ ಜ್ಞಾಪನಾ ಪತ್ರ

**ವಿಷಯ:** ಹಿರಿಯ ಶುಶ್ರೂಷಕ ಹುದ್ದೆಯಿಂದ ಉಪನ್ಯಾಸಕರ ಹುದ್ದೆಗೆ ಸ್ಥಾನಪನ್ನ ಪದೋನ್ನತಿ ನೀಡುವ ಬಗ್ಗೆ.

**ಉಲ್ಲೇಖ:** ಈ ನಿರ್ದೇಶನಾಲಯದ ಅ.ಜ್ಞಾ ಪತ್ರ ಸಂಖ್ಯೆ:ಎನ್‌ಆರ್‌ಎಸ್(1)92/09-10 ದಿನಾಂಕ:04/03/2016ರ ಅಂತಿಮ ಜೇಷ್ಠತಾ ಪಟ್ಟಿ

*-**-*-*

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಹಿರಿಯ ಶುಶ್ರೂಷಕರಿಗೆ ವೇತನ ಶ್ರೇಣಿ ರೂ.24,000-45,300/-ರಲ್ಲಿ ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟು ಹಾಗೂ ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು(ವೈದ್ಯರು ಮತ್ತು ಇತರೆ ಸಿಬ್ಬಂದಿ ವರ್ಗಾವಣೆ ನಿಯಂತ್ರಣ) ಕಾಯ್ದೆ ಅಧಿನಿಯಮ 2011 ಮತ್ತು ತಿದ್ದುಪಡಿ ನಿಯಮ 2013ರ ನಿಯಮ 18 'ಸಿ' ಹಾಗೂ 'ಡಿ' ಅನ್ವಯ ಕೌನ್ಸಿಲಿಂಗ್‌ಗೆ ಹಾಜರಾಗಿ ಸ್ಥಳ ಆಯ್ಕೆ ಮಾಡಿಕೊಂಡಂತೆ ಉಪನ್ಯಾಸಕರ ಹುದ್ದೆಗೆ ಸ್ಥಾನಪನ್ನ ಪದೋನ್ನತಿಯನ್ನು ನೀಡಲಾಗಿದೆ.

| ಕ್ರ.ಸಂ. | ಜೇಷ್ಠತಾ ಸಂಖ್ಯೆ | ನೌಕರರ ಹೆಸರು ಮತ್ತು ಕಾರ್ಯನಿರತ ಸ್ಥಳ | ಕೌನ್ಸಿಲಿಂಗ್‌ನಲ್ಲಿ ಸ್ಥಳ ನಿಯುಕ್ತಿ ಮಾಡಿ ನೇಮಿಸಿದ ಸಂಸ್ಥೆಯ ಹೆಸರು |
|---|---|---|---|
| 1 | 82 | ರೇಖಾ ಎಸ್ ಕಿರಣಿ, ಜಿಲ್ಲಾ ಆಸ್ಪತ್ರೆ ಗುಲ್ಬರ್ಗ | ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ ಹಾಸನ |
| 2 | 137 | ಭಾರತಿ ಜಿ ಕೊಂಗನೊಳ್ಳಿ, ಕಿಮ್ಸ್ ಹುಬ್ಬಳ್ಳಿ. | Not opted |
| 3 | 148 | ಫಿರ್ದೋಸ್ ಫಾತೀಮಾ, ಕೆ.ಆರ್.ಆಸ್ಪತ್ರೆ ಮೈಸೂರು | Not opted |
| 4 | 159 | ಬಿ.ಎಂ ಪ್ರೇಮ, ಹೆಚ್‌ಎಸ್‌ಐಎಸ್ ಘೋಷಾ ಆಸ್ಪತ್ರೆ. ಬೆಂಗಳೂರು | ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ ಬೆಂಗಳೂರು |

ಷರತ್ತುಗಳು:-

1) ಈ ಅ.ಜ್ಞಾ ಪತ್ರದಲ್ಲಿ ಸ್ಥಾನಪನ್ನ ಪದೋನ್ನತಿ ನೀಡಿರುವ ನೌಕರರು ಜೇಷ್ಠತೆಯಲ್ಲಿ ಕಿರಿಯರಾಗಿರುವುದು ಕಂಡು ಬಂದಲ್ಲಿ ನೌಕರರ ಪದೋನ್ನತಿಯನ್ನು ಹಿಂಪಡೆಯುವ/ರದ್ದುಪಡಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

2) ಸದರಿ ನೌಕರರ ವಿರುದ್ಧ ಇಲಾಖಾ ವಿಚಾರಣೆ ಬಾಕಿಯಿದ್ದು, ಮಾಹಿತಿ ನೀಡದೆ ಇರುವುದು ಕಂಡು ಬಂದಲ್ಲಿ ಸಂಬಂಧಿಸಿದ ನೌಕರರ ನಿಯಂತ್ರಣಾಧಿಕಾರಿಗಳು ಹಾಗೂ ನೌಕರರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು.

3) ಈ ಅ.ಜ್ಞಾ ಪತ್ರದಲ್ಲಿ ಸ್ಥಾನಪನ್ನ ಪದೋನ್ನತಿ ನೀಡಿರುವ ನೌಕರರು ದಂಡನಾವಧಿಯಲ್ಲಿದ್ದಲ್ಲಿ, ಅಂತಹ ನೌಕರರು ಈ ಸ್ಥಾನಪನ್ನ ಪದೋನ್ನತಿ ಪಡೆಯಲು ಅರ್ಹರಿರುವುದಿಲ್ಲ. ಸಂಸ್ಥೆಗಳ ಮುಖ್ಯಸ್ಥರು ಪದೋನ್ನತಿ ಹೊಂದಿರುವ ನೌಕರರನ್ನು ಕರ್ತವ್ಯದಿಂದ ಬಿಡುಗಡೆ ಮಾಡುವ ಮುನ್ನ ಮೇಲ್ಕಂಡ ಎಲ್ಲಾ ಅಂಶಗಳನ್ನು ಸೇವಾ ಪುಸ್ತಕದೊಂದಿಗೆ ಪರಿಶೀಲಿಸತಕ್ಕದ್ದು.

4) ಪದೋನ್ನತಿ ಪಡೆಯಲು ಸುಳ್ಳು ಜಾತಿ ಪ್ರಮಾಣ ಪತ್ರ ಹಾಗೂ ಇತರೆ ದಾಖಲೆಗಳನ್ನು ಸಲ್ಲಿಸಿರುವುದು ಕಂಡು ಬಂದಲ್ಲಿ ಅಂತಹವರ ಪದೋನ್ನತಿಯನ್ನು ರದ್ದುಪಡಿಸಲಾಗುವುದು. ಹಾಗೂ ಅಂತಹವರನ್ನು ಶಿಸ್ತು ಕ್ರಮಕ್ಕೆ ಒಳಪಡಿಸಲಾಗುವುದು.

5) ಪದೋನ್ನತಿ ಹೊಂದಿದ ನೌಕರರು ಕೂಡಲೇ ಕರ್ತವ್ಯದಿಂದ ಬಿಡುಗಡೆ ಮಾಡಿ ನೇಮಕ ಮಾಡಿದ ಸ್ಥಳದಲ್ಲಿ ಕರ್ತವ್ಯದ ಮೇಲೆ ಹಾಜರಾಗುವಂತೆ ಸಂಬಂಧಪಟ್ಟ ನೌಕರರಿಗೆ ಸೂಚಿಸುವಂತೆ ಮೇಲಾಧಿಕಾರಿಗಳಿಗೆ ಆದೇಶಿಸಿದೆ. ಪಟ್ಟಿಯಲ್ಲಿರುವ ನೌಕರರು ಪ್ರಸ್ತುತ ನಿಮ್ಮ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸದೇ ಇದ್ದಲ್ಲಿ ಅವರು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಕಛೇರಿಗೆ ಮಾಹಿತಿಯನ್ನು ಕಳುಹಿಸಲು ಕೊಡಲು ಕೋರಲಾಗಿದೆ.

6) ಪದೋನ್ನತಿ ನೀಡಿ ನೇಮಕ ಮಾಡಿರುವ ನೌಕರರು ಈ ಆದೇಶ ಹೊರಡಿಸಿದ 07 ದಿನಗಳ ಅವಧಿಯಲ್ಲಿ ನೇಮಕಾತಿ ಮಾಡಿದ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾಗಿ, ಹಾಜರಾತಿ ವರದಿಯನ್ನು ನಿರ್ದೇಶನಾಲಯಕ್ಕೆ ಕಳುಹಿಸಿಕೊಡುವಂತೆ ಸೂಚಿಸಿದೆ. ತಪ್ಪಿದ್ದಲ್ಲಿ ಅಂತಹವರ ಪದೋನ್ನತಿ ಆದೇಶವನ್ನು ಯಾವುದೇ ಮುನ್ಸೂಚನೆ ನೀಡದೆ ಹಿಂಪಡೆಯಲಾಗುವುದು.

7) ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳ ಚಲನವಲನ ಆದೇಶ ಪಡೆಯುವ ಅವಶ್ಯಕತೆ ಇರುವುದಿಲ್ಲ. ಸಂಬಂಧಿಸಿದ ಮೇಲಾಧಿಕಾರಿಗಳು ಪದೋನ್ನತಿ ಹೊಂದಿದ ನೌಕರರನ್ನು ಬಿಡುಗಡೆ ಮಾಡತಕ್ಕದ್ದು, ಆಯ್ಕೆ ಮಾಡಿಕೊಂಡ ಸ್ಥಳಕ್ಕೆ ಹಾಜರಾಗುವುದು ಮತ್ತು ಹಾಜರಾದ ಮಾಹಿತಿಯನ್ನು ಸಂಬಂಧಿಸಿದ ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳು ಹಾಗೂ ನಿರ್ದೇಶನಾಲಯಕ್ಕೆ ವರದಿಯನ್ನು ಸಲ್ಲಿಸುವುದು.

8) ಸ್ವಾಯುತ್ತ ಸಂಸ್ಥೆಗಳಲ್ಲಿನ ಖಾಲಿ ಹುದ್ದೆಗಳನ್ನು ಆಯ್ಕೆ ಮಾಡಿಕೊಳ್ಳುವ ನೌಕರರುಗಳು ಕಡ್ಡಾಯವಾಗಿ ಕನಿಷ್ಠ ಮೂರು(03) ವರ್ಷದಿಂದ ಗರಿಷ್ಠ ಐದು(05) ವರ್ಷಗಳ ಕಾರ್ಯ ನಿರ್ವಹಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

**ಕೌನ್ಸೆಲಿಂಗ್ ಮೂಲಕ ನೇಮಕ ಮಾಡಿದ ಸ್ಥಳಕ್ಕೆ ನೇರವಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಸೂಚಿಸಿದೆ.**

**ಮುಖ್ಯ ಆಡಳಿತಾಧಿಕಾರಿಗಳು-2**
**ಆರೋಗ್ಯ ಮತ್ತು ಕು.ಕ.ಸೇವೆಗಳು**

ಪ್ರತಿಯನ್ನು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:

1) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ______________ ಜಿಲ್ಲೆ.
2) ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ,------------------------------ಜಿಲ್ಲೆ.
3) ಪ್ರಾಂಶುಪಾಲರು, ..........................................................................ಜಿಲ್ಲೆ.
4) ಆಡಳಿತ ವೈದ್ಯಾಧಿಕಾರಿಗಳು,----------------------------------------------ಜಿಲ್ಲೆ
5) ಸಂಬಂಧಪಟ್ಟ ನೌಕರರಿಗೆ
6) ಕಛೇರಿ ಪ್ರತಿ.